ನಿಜವಾದ ಗಾಂಧಿವಾದಿಗಳು ಇರುವುದು ಕಡಿಮೆಯೇ. ಅಂಥ ಗಾಂಧೀಜಿ ಹೇಳಿದ್ದೆಲ್ಲವೂ ಯಾವತ್ತಿಗೂ ಲೌಕಿಕವಾದವೇ. ಅಲೌಕಿಕವಾದ್ದದ್ದಲ್ಲ. ಗಾಂಧೀಜಿ ರಾಜಕಾರಣಿ ಎನ್ನುವುದಕ್ಕಿಂತಲೂ ಅಧ್ಯಾತ್ಮವಾದಿ ಎಂದು ಹೇಳಬಹುದೇನೋ! ಯಾಕೆಂದರೆ ಅವರಿಗೆ ಅಲೌಕಿಕ ಎನ್ನುವ 'ಬುರುಡೆ ಲೋಕ' ಬೇಡ ಎನ್ನುವ ಇರಾದೆ ಇದ್ದ ಹಾಗೆ ಇತ್ತು. ಈ ಲೋಕವೇ ಆಧ್ಯಾತ್ಮಿಕದ್ದಾಗಬೇಕು ಎನ್ನುವಂತಿದ್ದರು ಅವರು. ಅಂಥ ಅಧ್ಯಾತ್ಮವಾದ ಅಂದರೆ ನಡೆ ಬೇರೆ ಅಲ್ಲ ನುಡಿ ಬೇರೆ ಅಲ್ಲ ಎಂಬುದು ತಾನೇ? ಹಾಗಾಗಿ ಅದೇ ಭೌತವಾದ' ಎಂದು ಹೇಳಿದ್ದುಂಟು. ಇನ್ನು ಹಲವರು 'ಎಲ್ಲರೂ ಹೇಳುತ್ತಾರೆ ಎಂದು ನಾವೂ ಹಾಗೇ ಹೇಳುವುದು ಮಾರಾಯರೇ. ನಮಗೆ ಭೌತವಾದದ ಬಗ್ಗೆ ಏನೂ ಗೊತ್ತಿಲ್ಲ. ಆದರೆ ನಮ್ಮ ದುಗ್ಗೋಜಿ ಮಾಸ್ತ್ರಂಥ ಮಾಸ್ತ್ರು ಘಕ್ಕ ಕಾಣಸಿಗುವುದು ಕಷ್ಟ' ಎನ್ನುತ್ತಿದ್ದರು.

ಇಂಥ ದುಗ್ಗೋಜಿ ಮಾಸ್ತ್ರು ನಿವೃತ್ತರಾದ ನಂತರ ಅವರ ಬಂಧು ಬಾಂಧವರಿರುವ ಮಂಜೇಶ್ವರಕ್ಕೆ ಮರಳಿ ಹೋಗಬಹುದಿತ್ತಾದರೂ 'ನಾವು ಒಳ್ಳೆಯವರಾದರೆ ಊರೂ ಒಳ್ಳೇದೇ' ಎಂಬಂತೆ, ನಿವೃತ್ತರಾಗುವ ಪೂರ್ವದಲ್ಲೇ ಸೀತಾಪುರದ ಶ್ಯಾನುಭಾಗರನ್ನು ಕಾಡಿ ಐವತ್ತು ಸೆಂಟ್ಸನಷ್ಟು ಸ್ಥಳವನ್ನು 'ದರ್ಕಾಸ್ತು' ಮಾಡಿಸಿದ್ದರು. ಆ ಸ್ಥಳದಲ್ಲಿ ಎಂಟು ತೆಂಗು, ಎರಡು ಹಲಸು ಮತ್ತು ಒಂದು ಮಾವಿನ ಗಿಡ ಹಾಕಿ ಆ ಜಾಗದ ಮಧ್ಯಭಾಗದಲ್ಲಿ 'ಕುಟೀರ' ಎನ್ನುವ ಹೆಸರಿನಲ್ಲಿ 'ಕುಟೀರ'ದ ರೀತಿಯೇ ಇರುವ ಹಂಚು ಹೊದಿಸಿದ ಪುಟ್ಟ ಮನೆ ಕಟ್ಟಿದ್ದರು. ಆ ಮನೆಗೆ ತಾಗಿಕೊಂಡೇ ಒಂದು ಬಚ್ಚಲುಮನೆ, ಅದರ ಮಣ್ಣಗೋಡೆಯ ಬದಿಯಲ್ಲಿ ಕಕ್ಕಸು, ತುಸು ಆಚೆ ಎರಡು ಆಕಳುಗಳನ್ನು ಸಾಕಲು ಸಾಕಾಗುವಷ್ಟು ಇಕ್ಕಟ್ಟಿನ ಒಂದು ಪುಟ್ಟ ಹಟ್ಟಿಯನ್ನೂ 'ಎಕ್ಸಿಸ್ಪೋಟೀಸಿಸ್ ಶೀಟ'ನಿಂದ ನಿರ್ಮಿಸಿದ್ದರು. ಅವರಿಗೆ ಮಕ್ಕಳಿಲ್ಲದ್ದರಿಂದ, ಅವರ ಮನೆಯಲ್ಲಿ ನಾಲ್ಕು ಬೆಕ್ಕು, ಎರಡು ನಾಯಿ ಮತ್ತು ಒಂದು ಗಿಳಿ ಗೂಡೂ ಇತ್ತು. ಆ ಗೂಡಿನೊಳಗಿದ್ದ ಗಿಳಿಯನ್ನು ಅವರ ಶಿಷ್ಯನೊಬ್ಬ ಕೇರೆ ಹಾವಿನ ಬಾಯಿಯಿಂದ ಬಿಡಿಸಿ ತಂದು ಅವರಿಗೆ ಕೊಟ್ಟದ್ದಾಗಿತ್ತು.

ದುಗ್ಗೋಜಿ ಮಾಸ್ತ್ರ ಹೆಂಡತಿ ನೀಲಮ್ಮ ಮಾಸ್ತ್ರಿಗೆ 'ಹೇಳಿ ಮಾಡಿಸಿದಂಥ ಹೆಂಡತಿ!' ಅವರು ಖಾದಿ ಸೀರೆಯನ್ನೇ ಉಡುತ್ತಿದ್ದುದು ಮಾಸ್ತ್ರಿಗಾಗಿಯೋ ಅಥವಾ ಸ್ವಇಚ್ಛೆಯಿಂದಲೋ ಎನ್ನುವುದು ಮಾಸ್ತ್ರನ್ನು ಬಿಟ್ಟರೆ, ಸೀತಾಪುರದ ಮಂದಿಗೆ ಗೊತ್ತಿದ್ದಿಲ್ಲ. ಹಾಗೆಂದು ಅವರಲ್ಲಿ ವಿಚಾರಿಸಲು ಯಾರೂ ಹೋಗಿಲ್ಲ. ಆದರೆ ನೀಲಮ್ಮ ಮಾಸ್ತ್ರಿಗಿಂತಲೂ 'ದೊಡ್ಡ' ಮಾತುಗಾರ್ತಿ! ಗೃಹಿಣಿಯಾಗಿಯೇ ಇರುವ ಅವರು ನೆರೆಕರೆಯ ಮಂದಿಗೆ ಅಥವಾ ಮನೆಗೆ ಬಂದವರಿಗೆಲ್ಲ ತಾಯಿಯೇ! ಆಕೆ ಯಾರಲ್ಲೇ ಆದರೂ ಒಂದಷ್ಟು ಹೊತ್ತು ಮಾತನಾಡಲು ಪ್ರಾರಂಭಿಸಿದರೆ, ಆ ಮಂದಿ 'ನಾನು ಬರುತ್ತೇನೆ' ಎಂದು ಮೇಲೆದ್ದಾಗ 'ನಿಮಗೇನು ಅವಸರ? ಸ್ವಲ್ಪ ಕೂಡಿ. ಚಹಾ ಮಾಡುತ್ತೇನೆ ಇಲ್ಲವೇ ಮಜ್ಜಿಗೆ ನೀರು ಕೊಡುತ್ತೇನೆ' ಎಂದು ಅಂಥವರನ್ನು ಕೂಡಿಸಿ 'ಅಂದ ಹಾಗೆ ನಿಮ್ಮ ಮಗಳು ಈಗ ಎಲ್ಲಿದ್ದಾಳೆ? ಮಗನ ಡಿಗ್ರಿ ಆಯಿತೇ? ನೀವೀಗ ಅಮ್ಮಮ್ಮ ಆದಿರಾ ಹೇಗೆ?' ಇತ್ಯಾದಿ ಪ್ರಶ್ನೆ ಎಸೆದು, ಬಾಯಿ ತುಂಬಾ ನಕ್ಕು, ಮಾತನಾಡಿಸಿ ಬಂದವರ ಎದೆಯಲ್ಲಿ ಪುಳಕವನ್ನು ಹುಟ್ಟಿಸುತ್ತಿದ್ದರು.

ದುಗ್ಗೋಜಿ ಮಾಸ್ತ್ರು ತಮ್ಮ ವಿದ್ಯಾಭ್ಯಾಸದ ದಿನಗಳಲ್ಲಿ ಹೆಚ್ಚು ಓದಿರಲಿಲ್ಲ. ಆ ದಿನಗಳಲ್ಲಿ ಇದ್ದ Elementary School leaving certificate ಪರೀಕ್ಷೆ ಮಾತ್ರ ತೇರ್ಗಡೆಯಾಗಿ ಟೀಚರ್ಸ್ ಟ್ರೇನಿಂಗ್ ಮುಗಿಸಿ ಅಧ್ಯಾಪಕ ವೃತ್ತಿಗೆ ಬಂದಿದ್ದರು. ಹಾಗಾಗಿ ಅವರಿಗೆ ಒಳ್ಳೆಯ ವೇತನ ಇರಲಿಲ್ಲ. ಇದರಿಂದಾಗಿ ಪಿಂಚಣಿಯೂ ಅವರ ಸಂಸಾರಕ್ಕೆ – ಮೂಗು ಹಿಡಿದು ಮೀಯುವಷ್ಟು - ಮಾತ್ರ ಇತ್ತು! ಅರ್ಥಾತ್ 'ಅಲ್ಲಿಂದಲ್ಲಿಗೆ ಸಾಕೆ'ನ್ನುವಂತೆ ಇತ್ತು! ಹಾಗಾಗಿ ಅವರು ನಿವೃತ್ತಿಯ ನಂತರ ಎರಡು ಹಸುಗಳನ್ನು ಕಟ್ಟಿ ಸೀತಾಪುರದ ಹಾಲು ಉತ್ಪಾದಕರ ಸಂಘಕ್ಕೆ ಹಾಲು 'ಹಾಕಿದರೆ' (ನೀಡಿದರೆ) ಹೇಗೆ? ಎಂದು ಯೋಚಿಸಿದರು. ಆ ನೆಲೆಯಲ್ಲಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರನ್ನು ಭೇಟಿಯಾದರು. ಅಧ್ಯಕ್ಷರು ಅವರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ತೆಗಿಸಿ ಕೊಟ್ಟದ್ದಲ್ಲದೆ ಮಿಶ್ರತಳಿಯ ಒಂದು ದೊಡ್ಡ ರಾಸುವನ್ನು ತಂದು ಮಾಸ್ತ್ರ ಹಟ್ಟಿಯಲ್ಲಿ ಕಟ್ಟುವ ಹಾಗೆ ಮಾಡಿದರು. ಮಾಸ್ತ್ರು ಖುಶಿಯಲ್ಲಿ ಆ ರಾಸು ಮತ್ತು ಅದರ ಕರು ಎಲ್ಲ ತಮ್ಮ ಸಂಸಾರವೇ ಎಂದು ಬಗೆದರು. ತಾವೇ ಹಾಲು ಹಿಂಡಿ ಎರಡು ಫರ್ಲಾಂಗು ದೂರದಲ್ಲಿರುವ ಸೀತಾಪುರದ ಹಾಲು ಉತ್ಪಾದಕರ